

ಹೋದ ತಕ್ಷಣ ಅವರ ಬೆಂಬಲಿಗರು ಅಲ್ಲಿ ಗಲಾಟೆ, ದೊಂಬಿ ಮಾಡಿ ಬಸ್‌ಗಳನ್ನು ಸುಟ್ಟು ಹಾಕಿದ್ರು. ಆಗ ಗದಗದಿಂದ ನರಗುಂದಕ್ಕೆ ಹೋದೆ. ಸಾಮಾನ್ಯವಾಗಿ ಒಂದು ಗಲಭೆ, ದೊಂಬಿ ಆದ್ರೆ ಅಮಾಯಕರನ್ನು ಪೊಲೀಸ್ ಅಧಿಕಾರಿಗಳು ಹಿಡೀತಾರೆ. ಅವರ ಮೇಲೆ ಕೇಸ್ ಹಾಕ್ತಾರೆ. ಆದರೆ ನಾನು ಒಂದು ಹೆಜ್ಜೆ ಮುಂದೆ. ಅದು ಯಾರಿಂದ ಆಯಿತು, ಇದರಿಂದ ಲಾಭ ಯಾರಿಗೆ? ಎಂಬುದನ್ನು ತಿಳೀಬೇಕು. ಮೇಲಾಗಿ ಇದು ಹೈಕಮಾಂಡ್ ಗಮನ ಸೆಳೆಯಬೇಕು ಎಂಬ ಕಾರಣಕ್ಕೆ ಮಾಡಿದ್ದಾರೆ ಅನ್ನೋದು ಗೊತ್ತಾಯ್ತು. ಆಗ ಈ ಗಲಾಟೆಗೆ ಮೂಲಭೂತ ಕಾರಣ ಯಾರು ಅವರನ್ನು ಹಿಡಿಯಬೇಕು ಎಂದು ಎಂದು ಅಧಿಕಾರಿಗಳಿಗೆ ಹೇಳಿದೆ. ಬರೀ ಅಮಾಯಕರನ್ನು ಹಿಡಿಯುವುದು ಸರಿಯಲ್ಲ ಎಂದೆ. ನನ್ನ ಕೆಳಗಿನ ಅಧಿಕಾರಿಗಳಿಗೆ ಅಷ್ಟು ಧೈರ್ಯ ಇರಲಿಲ್ಲ. ಆದ್ರೆ ನಾನು ಮಾಜಿ ಎಂಎಲ್‌ಎ ಅವರನ್ನು ಕರೆಸಿ ಎಂದು ಹೇಳಿದೆ. ಆಗ ಅಲ್ಲಿನ ಡಿಎಸ್‌ಪಿ 'ಅವರು ಇಲ್ಲ, ಬೆಂಗಳೂರಿಗೆ ಹೋಗಿದ್ದಾರೆ' ಅಂದ್ರು. ರಾತ್ರಿ ಎಷ್ಟು ಹೊತ್ತಾದ್ರು ನಾನು ಹೊರಟೇ ಇರಲಿಲ್ಲ. ಸ್ಟೇಷನ್‌ನಲ್ಲೇ ಕೂತಿದ್ದೆ. ಆಮೇಲೆ ಡಿಎಸ್‌ಪಿ ಮಾಜಿ ಎಂಎಲ್‌ಎ ಅವರನ್ನು ಕರೆಸಿದ್ರು. ಅವರನ್ನು ವಿಚಾರಿಸಿ ಅರೆಸ್ಟ್ ಮಾಡಿ ಅಂತ ಡಿಎಸ್‌ಪಿಗೆ ಹೇಳಿ ಜೈಲಿಗೆ ಕಳಿಸಲು ಸೂಚಿಸಿದೆ. ಅಷ್ಟೇ ಅಲ್ಲ ಅವರು ಮಾಜಿ ಎಂಎಲ್‌ಎ ಸಂಪರ್ಕದಲ್ಲಿ ಇದ್ರೂ ಕೂಡ 'ನನ್ನ ಬಳಿ ಅವರು ಇಲ್ಲ, ಬೇರೆ ಊರಿಗೆ ಹೋಗಿದ್ದಾರೆ' ಅಂತ ಸುಳ್ಳು ಮಾಹಿತಿ ನೀಡಿದ್ದಕ್ಕೆ ಡಿಎಸ್‌ಪಿ ಅವರ ಮೇಲೂ ರಿಪೋರ್ಟ್ ಕೊಟ್ಟೆ. ಅವರಿಗೆ ಒಂದು ವರ್ಷ ಕಾಲ ಕೆಲಸದಿಂದ ಅಮಾನತು ಕೂಡ ಆಯ್ತು. ಕೆಲವು ಸಲ

> ನಂಗೆ ಯಾವತ್ತೂ ಸ್ವಾತಂತ್ರ್ಯ ಇಲ್ಲ ಅಂತ ಅನಿಸಲೇ ಇಲ್ಲ.

ವೃತ್ತಿಯಲ್ಲಿ ಇಂಥ ಖಡಕ್ ನಿರ್ಧಾರವನ್ನೂ ತಗೋಬೇಕಾಗುತ್ತದೆ.

ಪೊಲೀಸ್ ತರಬೇತಿ ನೀಡುವಾಗ ಮಹಿಳೆ ಪುರುಷ ಎಂಬ ಭೇದ ಇರ್ಲಿಲ್ಲ. ನಿತ್ಯವೂ 14 ಕಿಮೀ ಓಡಬೇಕು, ವೆಪನ್ ಆನ್ ರನಿಂಗ್ ತರಬೇತಿ ಕೂಡ ಪುರುಷರ ಜತೆ ಸಮನಾಗಿ ಇರ್ತಿತ್ತು. ತರಬೇತಿ, ಪರೀಕ್ಷೆ ಎಲ್ಲ ಕಡೆ ಪುರುಷರ ಹಾಗೆ ನಡೀತಾ ಇತ್ತು. ಹೊರಗೆ ಬಂದಾಗ ಈ ಪೋಸ್ಟಿಂಗ್ ಮಹಿಳೆಗೆ ಸೂಕ್ತ ಆಗುತ್ತೋ ಇಲ್ವೋ ಅಂತ ಯೋಚನೆ ಮಾಡ್ತಾರೆ. ತರಬೇತಿ ಪಡೀತಾ ಇರೋವಾಗ ಒಬ್ಬ ಬ್ಯಾಚ್‌ಮೇಟ್ 'ನೀವು ಮಹಿಳೆಯರು ಯಾಕೆ ಈ ಫೀಲ್ಡ್‌ಗೆ ಬರ್ತೀರಾ?' ಅಂತ ಕೇಳ್ತಾನೆ. ಇಷ್ಟು ಓದಿದವರ ಮನಸ್ಥಿತಿಯೂ ಹೀಗೇ ಇದೆ. ಇದು ಯಾಕೆ ಹೀಗೆ?

ಮಹಿಳೆಯರು ಸ್ಟ್ರಾಂಗ್ ಆಗಿದ್ದಾರೆ ಎನ್ನುವುದು ಅನೇಕ ಪುರುಷರಿಗೆ ಗೊತ್ತಿಲ್ಲ. ಪೊಲೀಸ್ ಇಲಾಖೆಯಲ್ಲಿ ಯಾವುದೋ ಒಂದು ಪೋಸ್ಟ್‌ಗೆ ಹಾಕುವಾಗ 'ಅಲ್ಲಿಗೆ ಸ್ವಲ್ಪ ಟಫ್ ಇರೋರು ಬೇಕು' ಅಂತ ಒಂದು ಮಾತು ಕೇಳಿ ಬಂದಿತ್ತು. ಟಫ್ ಇರೋದು ಅಂದ್ರೆ ಏನು? ಇದು ಹಾಸ್ಯಾಸ್ಪದ. ಮಹಿಳೆಯರು ನನ್ನ ತರಹ ಪುರುಷ ಪ್ರಧಾನ ಹುದ್ದೆಗಳನ್ನು ಅಲಂಕರಿಸಿ ಸಾಬೀತು ಮಾಡಿ ತೋರಿಸಿದಾಗ ನಾವು ಸ್ಟ್ರಾಂಗ್ ಅಂತ ಸಾಬೀತಾಗುತ್ತೆ. ನಾನೀಗ ಪ್ರೂವ್ ಮಾಡಿದ್ದೀನಿ, ಮಹಿಳೆಯರು ಸ್ಟ್ರಾಂಗ್ ಅಂತ.

ಇನ್ನೊಮ್ಮೆ ಬೀದರ್‌ನಲ್ಲಿ ಒಂದು ಕಡೆ ಭಾಷಣ ಮಾಡಲು ಹೋಗಿದ್ದೆ. ಮಾತಾಡ್ತಾ ಇರೋವಾಗ 'ನಮ್ಮ ತಂದೆ ತಾಯಿಗೆ ಇಬ್ಬರು ಹೆಣ್ಣು ಮಕ್ಕಳು' ಎಂದೆ. ಆಗ ಮುಂದಿನ ಸಾಲಿನಲ್ಲಿ ಕುಳಿತಿದ್ದ ಒಬ್ಬ ಮಹಿಳೆ ವಿಷಾದ ವ್ಯಕ್ತಪಡಿಸಿದಳು. ಆಗ ನಾನು ಹೇಳಿದೆ, ನಾವಿಬ್ಬರು ಮಕ್ಕಳೂ ಚೆನ್ನಾಗಿ ಓದಿ ಕೆಲಸ ಮಾಡ್ತಿದ್ದೀವಿ. ಗಂಡು ಮಕ್ಕಳಿಗಿಂತ ನಾವೇನೂ ಕಡಿಮೆ ಇಲ್ಲ. ಕೆಲಸ ಮಾಡಿಕೊಂಡು ತಂದೆ ತಾಯಿಯನ್ನೂ ನೋಡ್ಕೋತೀವಿ ಅಂತ. ಸಂಚಿಯ ಹೊನ್ನಮ್ಮ ಬರೆದ 'ಹದಿಬದೆಯ ಧರ್ಮ'ದಲ್ಲಿ ಇರುವಂತೆ 'ಹೆಣ್ಣು ಹೆಣ್ಣೆಂದೇಕೆ ಬೀಳುಗೈವಿರಿ.. ಕಣ್ಣು ಕಾಣದ ಗಾವಿಲರು..' ಅಂತ. ಹುಡುಗ ಆದ್ರೆ ಏನು ಕಿರೀಟ ಇಲ್ಲ ಅಂತ ನಾನು ಹೇಳ್ದೆ.

ದೌರ್ಜನ್ಯ ಪ್ರಕರಣಗಳ ಬಗ್ಗೆ ಹೇಳೋದಾದ್ರೆ ಹಿಂದೆ ಕೂಡ ದೌರ್ಜನ್ಯ ಆಗ್ತಾ ಇತ್ತು. ಈಗ ಮಹಿಳೆಯರು ತುಂಬ ಜನ ಕೆಲಸಕ್ಕೆ ಬಂದಿದ್ದಾರೆ. ಹಿಂದೆ ಮಹಿಳೆಯರು ಹೆಚ್ಚಾಗಿ ಕೆಲಸಕ್ಕೆ  ಹೋಗ್ತಾ ಇರಲಿಲ್ಲ. ಈಗ ಫ್ಯಾಕ್ಟರಿ, ಸಾಫ್ಟ್‌ವೇರ್, ಉದ್ಯಮ ಹೀಗೆ ಸಾಕಷ್ಟು ಮಹಿಳೆಯರು ಮುಂದೆ ಬಂದಿದ್ದಾರೆ. ಸ್ವಾತಂತ್ರ್ಯ ಕೂಡ ಸಿಕ್ಕಿದೆ. ಕಳೆದ 20 ವರ್ಷಗಳಿಂದ ಈಚೆಗೆ ನೋಡಿದರೆ ಬಹಳಷ್ಟು ಬದಲಾವಣೆ ಆಗಿದೆ. ಸ್ಥಾನಮಾನ, ಸ್ಥಿತಿಗತಿಯಲ್ಲಿ ಬದಲಾವಣೆ ಆಗಿದೆ. ಆದರೂ ದೌರ್ಜನ್ಯ ಪ್ರಕರಣ ಕೆಲಸ ಮಾಡುವ ಕಡೆ ಇರಬಹುದು, ಬಸ್‌ನಲ್ಲಿ ಹೋಗ್ತಾ ಇರೋವಾಗ, ದಾರಿಯಲ್ಲಿ ಹೋಗೋವಾಗ ಬಹಳಷ್ಟು ಕಡೆ ದೌರ್ಜನ್ಯ ನಡೀತಾ ಇರುತ್ತದೆ. ರಿಪೋರ್ಟ್ ಆಗುತ್ತೆ. ಹಾಗಂತ ಹಿಂದೆ ನಡೀತಾ ಇರಲೇ ಇಲ್ಲ ಎಂದು ಹೇಳೋಕಾಗಲ್ಲ.

ಮಹಿಳೆಗೆ ಪ್ರಕೃತಿಯೇ ಕೆಲವೊಂದು ನಿರ್ಬಂಧ ಹಾಕಿದೆ. ದೈಹಿಕ ಶಕ್ತಿ ಮಟ್ಟಿಗೆ ನೋಡಿದ್ರೆ ಮಹಿಳೆ ಪುರುಷರಿಗಿಂತ ಕಡಿಮೆ ಎನ್ನಬಹುದು. ಮಹಿಳೆಗೆ ಆರ್ಥಿಕ ಸ್ವಾವಲಂಬನೆ ಇಲ್ಲದೇ ಇರುವಾಗ ತಂದೆ, ಗಂಡ ಅವರನ್ನು ಅವಲಂಬಿಸಬೇಕಾಗುತ್ತೆ. ಆಗ ಎಲ್ಲದಕ್ಕೂ ಪುರುಷರನ್ನೇ ಕೇಳಬೇಕು ಎಂದಾಗ ಮಹಿಳೆಯ ಸ್ಥಾನಮಾನ ಕೆಳಗೆ ಇರುತ್ತದೆ. ಎಲ್ಲ ಸ್ವಾತಂತ್ರ್ಯದ ಮೂಲ ಆರ್ಥಿಕ ಸ್ವಾತಂತ್ರ್ಯ. ತಮ್ಮ ಕೈಲಾದ ವೃತ್ತಿಯನ್ನು ಮಹಿಳೆ ಮಾಡಿ ಆರ್ಥಿಕ ಸದೃಢತೆ ಸಾಧಿಸಬೇಕು. ಆಗ ಅದು ಆಕೆಯ ವ್ಯಕ್ತಿತ್ವವನ್ನೂ ವೃದ್ಧಿಸುತ್ತದೆ. ಸ್ಥಾನಮಾನ ಹೆಚ್ಚಿಸುತ್ತದೆ. ಬಹುತೇಕ ಆಯಕಟ್ಟಿನ ಸ್ಥಳಗಳಲ್ಲಿ ಪುರುಷರೇ ಇರೋದ್ರಿಂದ ನಾವು ಡಬಲ್ ಎಫರ್ಟ್ ಹಾಕಬೇಕಾಗುತ್ತೆ.